**ಕರ್ನಾಟಕ ಸರ್ಕಾರ**

**ಕೇಂದ್ರೀಕೃತ ದಾಖಲಾತಿ ಘಟಕ, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ,**

**ಕೆಂಪೇಗೌಡ ರಸ್ತೆ, ಬೆಂಗಳೂರು-೫೬೦ ೦೦೯.**

ದೂರವಾಣಿ ಸಂಖ್ಯೆ: 080-22483140, 22483145 ಇ-ಮೇಲ್ ವಿಳಾಸ: cackarnataka1@gmail.com

**ಸಂ. ಸಿಎಸಿ-5/ಬಿ.ಇಡಿ.ದಾ/3/2025-26** **ದಿನಾಂಕ: 02/02/2026**

**ಪ್ರಕಟಣೆ**

1. 2025ನೇ ಸಾಲಿನ ಬಿ. ಇಡಿ. ದಾಖಲಾತಿ ಸಂಬಂಧ ನಾಲ್ಕನೆಯ ಪಟ್ಟಿಯ ಹಂಚಿಕೆ ಪ್ರಕಾರ ಸೇರ್ಪಡೆಯಾಗಿ ಉಳಿಕೆಯಾಗಿರುವ ಸೀಟುಗಳ ಕಾಲೇಜುವಾರು ಸೀಟ್ ಮ್ಯಾಟ್ರಿಕ್ಸನ್ನು ದಿನಾಂಕ: 29/01/2026ರಂದು https://schooleducation.karnataka.gov.in/ ರಲ್ಲಿ ಪ್ರಕಟಿಸಿ ಈ ತನಕ ಕಾಲೇಜುಗಳಿಗೆ ದಾಖಲಾಗದ ಅಭ್ಯರ್ಥಿಗಳು ನಾಲ್ಕನೆಯ ಸುತ್ತಿನ ಸೀಟು ಹಂಚಿಕೆಗಾಗಿ ತಮ್ಮ ಅಭಿಮತವನ್ನು ದಾಖಲಿಸಲು ದಿನಾಂಕ: 31/01/2026ರವರೆಗೆ ಅವಕಾಶವನ್ನು ಕಲ್ಪಿಸಿದ್ದು, ಅದರಂತೆ **ಐದನೆಯ ಸುತ್ತಿನ *ಸೀಟು ಹಂಚಿಕೆ ಪಟ್ಟಿಯನ್ನು https://sts.karnataka.gov.in/GPSTRHK*** ರಲ್ಲಿ ಬಿಡುಗಡೆಗೊಳಿಸಿದೆ.
2. ಅಭ್ಯರ್ಥಿಗಳು ಈಗ ಹಂಚಿಕೆಯಾದ ಕಾಲೇಜುಗಳಿಗೆ ಸೇರಬಯಸಿದಲ್ಲಿ ತಮ್ಮ ಯೂಸರ್ ಐಡಿ ಮತ್ತು ಪಾಸ್ ವರ್ಡನ್ನು ಬಳಸಿ ನಿಗದಿತ ಶುಲ್ಕದ ಚಲನನ್ನು ಮುದ್ರಿಸಿಕೊಂಡು ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಪಾವತಿಸಿ ಅದರ ಮೂಲ ಪ್ರತಿ ಹಾಗೂ ಇತರೆ ಎಲ್ಲಾ ಮೂಲ ದಾಖಲೆಗಳೊಂದಿಗೆ ಸಂಬಂಧಿಸಿದ **ಜಿಲ್ಲಾ ನೋಡಲ್ ಕೇಂದ್ರಕ್ಕೆ** ಹಾಜರಾಗಿ ಸಲ್ಲಿಸಿ **ದಿನಾಂಕ: 06/02/2026ರೊಳಗೆ** ದಾಖಲಾತಿ ಪತ್ರವನ್ನು ಪಡೆದುಕೊಳ್ಳುವುದು ಹಾಗೂ ನಿಗದಿತ ದಿನಾಂಕದೊಳಗೆ ಸಂಬಂಧಿಸಿದ ಕಾಲೇಜಿಗೆ ಸೇರ್ಪಡೆಗೊಳ್ಳಲು ಸೂಚಿಸಿದೆ.
3. ಈ ಪಟ್ಟಿಯಲ್ಲಿ ಮೊದಲ ಬಾರಿಗೆ ಹೆಸರು ಸೇರ್ಪಡೆಯಾಗಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳು ಮಾತ್ರ ಹಂಚಿಕೆಯಾದ ಕಾಲೇಜಿಗೆ ಸೇರ್ಪಡೆಗೊಳ್ಳಲು ಬಯಸದೇ ಇದ್ದಲ್ಲಿ, ಯಾವುದೇ ಶುಲ್ಕವನ್ನು ಪಾವತಿಸದೇ, ***'Opted for the Next Round'*** ಎಂದು ಅಭಿಮತವನ್ನು **ಇದೇ ಅವಧಿಯಲ್ಲಿ** ದಾಖಲಿಸಬೇಕು. ಇಂತಹ ಅಭ್ಯರ್ಥಿಗಳು, ಈ ಪಟ್ಟಿಯಲ್ಲಿ ಆಯ್ಕೆಯಾಗಿ **** ಗುರುತು** ಬಂದು ಸೀಟು ಹಂಚಿಕೆಯಾಗದ ಅಭ್ಯರ್ಥಿಗಳು ಮತ್ತು ಈ ತನಕದ ಪಟ್ಟಿಯಲ್ಲಿ ಹೆಸರು ಬಾರದಿರುವ ಅಭ್ಯರ್ಥಿಗಳಿಗೆ ಮಾತ್ರ ಮುಂದಿನ ಸುತ್ತಿನ ಆಯ್ಕೆಗೆ ಅವಕಾಶವನ್ನು ಕಲ್ಪಿಸಲಾಗುವುದು ಎಂದು ತಿಳಿಯಪಡಿಸಿದೆ.

(ಗೋವಿಂದ ಮಡಿವಾಳ)
ಜಂಟಿ ನಿರ್ದೇಶಕರು
ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು